**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ ಇವರ ಶೂನ್ಯ ವೇಳೆ ಪ್ರಸ್ತಾವನೆಗೆ ಕರಡು ಉತ್ತರ.**

**ವಿಷಯ:** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ 700ಕ್ಕೂ ಹೆಚ್ಚು ದಲಿತ ಉದ್ದಿಮೆದಾರರಿಗೆ ನೀಡಿರುವ ಕೈಗಾರಿಕಾ ನಿವೇಶನ ಅಥವಾ ಮಳಿಗೆಗಳನ್ನು ಹಿಂಪಡೆಯುವ ಪ್ರಕ್ರಿಯೆ ನಡೆಯುತ್ತಿದೆ. 2018 ರಲ್ಲಿ ದಲಿತರಿಗೆ ಕೈಗಾರಿಕಾ ನಿವೇಶನ ನೀಡುವ ಸಬ್ಸಿಡಿ ಪ್ರಮಾಣವನ್ನು ಶೇ.50 ಮತ್ತು ಶೇ.75 ರಷ್ಟು ಹೆಚ್ಚಿಸಲಾಗಿತ್ತು. ನಂತರವೇ, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚಿನ ನಿವೇಶನಗಳನ್ನು ಪಡೆದಿದ್ದರು. 3 ವರ್ಷದೊಳಗೆ ಈ ನಿವೇಶನದಲ್ಲಿ ಯೋಜನೆ ಅನುಷ್ಠಾನಗೊಳಿಸಬೇಕೆಂದು ಕೆಐಎಡಿಬಿ ನಿಯಮವಿದ್ದು, ಈಗ ಸದರಿ ನಿವೇಶನಗಳಲ್ಲಿ ಯಾವುದೇ ಯೋಜನೆಗಳನ್ನು ಪ್ರಾರಂಭಿಸದ ಕಾರಣ ಅವರ ನಿವೇಶನಗಳನ್ನು ಹಿಂದಕ್ಕೆ ಪಡೆಯಲಾಗುತ್ತಿದೆ. ಮತ್ತು 2009 ರಿಂದ ಜಾರಿಯಲ್ಲಿರುವ ನಿಯಮದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ದಿಮೆದಾರರಿಗೆ ಶೇ.22.65 ಹಾಗೂ 2014ರ ನಿಯಮದಂತೆ ಶೇ.25 ರಷ್ಟು ಕೈಗಾರಿಕಾ ಪ್ರದೇಶದಲ್ಲಿ ಭೂಮಿ ಹಂಚಿಕೆ ಮಾಡುವ ಸರ್ಕಾರದ ನೀತಿಯನ್ನು ಕೆಐಎಡಿಬಿ ಉಲ್ಲಂಘಿಸಿ ನಿಯಮಬಾಹೀರವಾಗಿ ಒಟ್ಟು 1034 ಎಕರೆ ಭೂಮಿಯನ್ನು ಬೇರೆಯವರಿಗೆ ಹಂಚಿಕೆ ಮಾಡಿದೆ. ಈ ಕುರಿತು ಹಿಂದಿನ ಸರ್ಕಾರ ಸಭೆ ನಡೆಸಿ ಲ್ಯಾಂಡ್ ಆಡಿಟಿಂಗ್ ಮಾಡಿಸಬೇಕು ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ಲಭ್ಯವಿರುವ ನಿವೇಶನಗಳನ್ನು ಮೀಸಲಾತಿ ಪ್ರಮಾಣಕ್ಕೆ ಕಡಿಮೆಯಾಗದಂತೆ ಹಂಚಿಕೆ ಮಾಡಬೇಕೆಂದು ಸೂಚಿಸಿದ್ದರೂ ಈವರೆಗೆ ಪಾಲನೆಯಾಗಿಲ್ಲ.

ಕೋವಿಡ್ ಕಾರಣದಿಂದ ಉದ್ದಿಮೆದಾರರು ಅವರಿಗೆ ಹಂಚಿಕೆಯಾಗಿದ್ದ ನಿವೇಶನದಲ್ಲಿ ಯೋಜನೆಗಳನ್ನು ಪ್ರಾರಂಭಿಸಲು ಸಾಧ್ಯವಾಗಿರಲಿಲ್ಲ, ಅಂತಹ ಉದ್ದಿಮೆದಾರರಿಗೆ ಅವರ ನಿವೇಶನವನ್ನು ಹಿಂದಕ್ಕೆ ಪಡೆಯುವ ಬದಲು ಯೋಜನೆಗಳನ್ನು ಪ್ರಾರಂಬಿಸಲು ಅವರಿಗೆ ಕಾಲಾವಕಾಶ ನೀಡಬೇಕು. ಮತ್ತು ನಿಯಮಬಾಹಿರವಾಗಿ ಹಂಚಿಕೆ ಮಾಡಿರುವ ಭೂಮಿಯ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ.

***

**ಉತ್ತರ :**

- ಮಂಡಳಿಯಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಅನುಮೋದನೆಗೊಳ್ಳುವ ಯೋಜನೆಗಳಿಗೆ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ. ಸದರಿ ಯೋಜನಾ ಅನುಮೋದನೆ ಸಮಿತಿ ಸಭೆಗಳಲ್ಲಿ ಅನುಮೋದನೆಗೊಂಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ.

- ಮಂಡಳಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಒಳಗೊಂಡಂತೆ ಎಲ್ಲಾ ಹಂಚಿಕೆದಾರರಿಗೆ ನೆರವೇರಿಸುವ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರಗಳಲ್ಲಿ, ಗುತ್ತಿಗೆ ಕರಾರು ಪತ್ರದ ದಿನಾಂಕದಿಂದ ಮೂರು ವರ್ಷ ಅವಧಿಯೊಳಗೆ ತಮ್ಮ ಉದ್ದೇಶಿತ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿ ಕರಾರು ವಿಧಿಸಲಾಗಿರುತ್ತದೆ ಮತ್ತು ಮೂರು ವರ್ಷಗಳ ನಂತರ, ಹಂಚಿಕೆದಾರರಿಗೆ ಯೋಜನೆ ಅನುಷ್ಠಾನಗೊಳಿಸಲು ಒಂದು ವರ್ಷ ಕಾಲಾವಕಾಶವನ್ನು ಹಂಚಿಕೆ ದರದ ಶೇ.2 ರಷ್ಟು ದಂಡ ವಿಧಿಸಿ, ಮತ್ತೊಂದು ವರ್ಷ ಕಾಲಾವಕಾಶವನ್ನು ಹಂಚಿಕೆ ದರದ ಶೇ.5 ರಷ್ಟು ದಂಡ ವಿಧಿಸಿ ವಿಸ್ತರಿಸಲು ಅವಕಾಶವಿರುತ್ತದೆ.

- ಕರ್ನಾಟಕ ದಲಿತ ಉದ್ದಿಮೆದಾರರ ಸಂಘದವರು ಮನವಿ ಸಲ್ಲಿಸಿ 2018 ಮತ್ತು 2019ನೇ ಸಾಲಿನಲ್ಲಿ ನಿವೇಶನ ಹಂಚಿಕೆ ಪಡೆದು ಸ್ವಾಧೀನ ಪತ್ರ ಪಡೆದಿರುವ ಪ್ರಕರಣಗಳಲ್ಲಿ 2019ನೇ ಸಾಲಿನಿಂದ 2021ರ ವರೆಗೂ ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಲಾಕ್ ಡೌನ್ ಇದ್ದ ಕಾರಣದಿಂದಾಗಿ ಈ ಸಮಯದಲ್ಲಿ ಹಂಚಿಕೆದಾರರು ಯೋಜನೆ ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿ, ಅಂತಹ ಉದ್ದಿಮೆದಾರರಿಗೆ ಯಾವುದೇ ದಂಡ ವಿಧಿಸದೇ ಯೋಜನೆ ಅನುಷ್ಠಾನಗೊಳಿಸಲು ಹೆಚ್ಚುವರಿಯಾಗಿ 2 ವರ್ಷ ಕಾಲಾವಕಾಶ ನೀಡಲು ಕೋರಿರುತ್ತಾರೆ.
- ಸದರಿ ಪ್ರಸ್ತಾವನೆಯನ್ನು ಕೆಐಎಡಿ ಮುಂದಿನ ಮಂಡಳಿ ಸಭೆಯಲ್ಲಿ ಚರ್ಚಿಸಲು ಮಂಡಿಸಿ, ಮುಂಬರುವ ಮಂಡಳಿ ಸಭೆಯ ತೀರ್ಮಾನದನುಸಾರ ಅಗತ್ಯ ಕ್ರಮವನ್ನು ಕೈಗೊಳ್ಳಲಾಗುತ್ತದೆ.
- ಮುಂದುವರೆದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಉದ್ದಿಮೆದಾರರಿಗೆ ದಿನಾಂಕ:21-03-2009 ರಿಂದ ಅನ್ವಯವಾಗುವಂತೆ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಶೇ.22.65% ರಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ಕೊರತೆಯುಂಟಾಗಿರುವ ಪ್ರಮಾಣವನ್ನು ಪರಿಶೀಲಿಸಿ ವಿವರಗಳನ್ನು ಸಲ್ಲಿಸಲು ಮಂಡಳಿಯ ಮುಖ್ಯ ಅಭಿಯಂತರರು-1 ರವರ ನೇತೃತ್ವದಲ್ಲಿ ಅಧಿಕಾರಿಗಳ ತಂಡ ರಚಿಸಿ ದಿನಾಂಕ:21-08-2023 ರಂದು ಅಧಿಕೃತ ಜ್ಞಾಪನ ಹೊರಡಿಸಲಾಗಿದೆ. ಈ ತಂಡದಲ್ಲಿ ಕರ್ನಾಟಕ ದಲಿತ ಉದ್ದಿಮೆದಾರರ ಸಂಘ (ರಿ) ರವರ ಸದಸ್ಯರು ಒಳಗೊಂಡಿರುತ್ತಾರೆ. ಸದರಿ ಅಧಿಕಾರಿಗಳ ತಂಡ ಮತ್ತು ಸಂಘದ ಸದಸ್ಯರು ಕೊರತೆ ಉಂಟಾಗಿರುವ ಪ್ರಮಾಣವನ್ನು ಅಂತಿಮಗೊಳಿಸಿ ವರದಿ ಸಲ್ಲಿಸಿದ ಮೇಲೆ, ಅದರನ್ವಯ ತ್ವರಿತವಾಗಿ ಸರಿದೂಗಿಸಲಾಗುತ್ತದೆ.
- ಮೀಸಲಾತಿಯಲ್ಲಿನ ಶೇಕಡವಾರು ಪ್ರಮಾಣ ಕಡಿಮೆಯಾಗಿರುವ ಕೈಗಾರಿಕಾ ಪ್ರದೇಶಗಳಲ್ಲಿ ಪಕ್ಕದ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಶೇಕಡವಾರು ಕೊರತೆಯನ್ನು ಸರಿದೂಗಿಸಲಾಗುತ್ತಿದೆ.

ಸಂಖ್ಯೆ: ಸಿಐ 113 ಐಎಪಿ 2024

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು